

ದೂರದೂರಿನ ಆಸಕ್ತರನ್ನು ಸೆಳೆಯುವ ಪುಸ್ತಕ ಮನೆ

ತಾಂತ್ರಿಕ... ಹೀಗೆ ಯಾವುದುಂಟು, ಯಾವುದಿಲ್ಲ. ಎಲ್ಲಾ ವಿಧದ ಸಾಹಿತ್ಯ ಪ್ರಕಾರಗಳ ಸಂಗ್ರಹಗಳು ಒಂದೂ ಸೂರಿನಡಿ. ಹಿಂದೂ, ಜೈನ, ಇಸ್ಲಾಂ, ಕ್ರೈಸ್ತ ಧರ್ಮಗಳ ಗ್ರಂಥಗಳು. ನಾಲ್ಕು ಸಾವಿರಕ್ಕೂ ಮಿಕ್ಕಿ ವಿಶ್ವಕೋಶಗಳು.

ಐನೂರಕ್ಕೂ ಹೆಚ್ಚು ರಾಮಾಯಣ ಕೃತಿಗಳಿವೆ. ಇದರಲ್ಲಿ 1785ರ ತೆಲುಗು ರಾಮಾಯಣವೂ ಸೇರಿದೆ! ಗಾಂಧೀಜಿ ಕುರಿತು ಎರಡೂವರೆ ಸಾವಿರ ಕೃತಿಗಳಿವೆ. ಮೂರು ಸಾವಿರಕ್ಕೂ ಮಿಕ್ಕಿ ಭಗವದ್ಗೀತೆ ರಚನೆಗಳಿವೆ. 'ಇವೆಲ್ಲಾ ನಮ್ಮ ಭಾಷಾ ಸೊಗಸಿನ ಮಾದರಿಗಳು. ಕನ್ನಡದಲ್ಲಿರುವಷ್ಟು ಸಂಪನ್ಮೂಲ ಬೇರೆ ಯಾವ ಭಾಷೆಯಲ್ಲಿ ಇರಲಾರದು' ಎನ್ನುತ್ತಾರೆ. ಇಪ್ಪತ್ತೈದು ಸಾವಿರಕ್ಕೂ ಮಿಕ್ಕಿ ಅಂತರರಾಷ್ಟ್ರೀಯ ಮ್ಯಾಗಜ್ಹಿನ್‌ಗಳಿವೆ! ಕನ್ನಡ, ತೆಲುಗು, ಹಿಂದಿ, ಆಂಗ್ಲ, ಮರಾಠಿ, ಚೈನೀಸ್... ಹೀಗೆ ಹತ್ತಾರು ಭಾಷೆಗಳ ಮಿಳಿತ.


ಹಳೆಯ ಪುಸ್ತಕಗಳಿಗೆ ವರ್ತಮಾನದಲ್ಲೂ ಬೇಡಿಕೆಯಿದೆ. ಜತನದಿಂದ ಕಾಪಿಟ್ಟ ಪುಸ್ತಕಗಳು ಭವಿಷ್ಯದಲ್ಲಿ ಸಾವಿರಾರು ರೂಪಾಯಿಗೆ ಮಾರಾಟವೂ ಆಗಬಹುದು. ಈಗಂತೂ ಇದಕ್ಕಾಗಿ ಆನ್‌ಲೈನ್ ವ್ಯವಸ್ಥೆಗಳಿವೆ. ಅವರಲ್ಲಿರುವ ಕುರಾನ್ ಕೃತಿಯನ್ನು ಐವತ್ತು ಸಾವಿರ ರೂಪಾಯಿಗೆ ಯಾರೋ ಕೇಳಿದ್ದರಂತೆ. 'ಗಳಿಸಿದ್ದನ್ನು ಕಳಕೊಂಡರೆ ಮತ್ತೆ ಸಿಗಲಾರದು' ಎಂದು ಮುಗುಳ್ನಕ್ಕರು.

## ಮುಕ್ತ ಪ್ರವೇಶ

ಮೊದ ಮೊದಲು ಆಸಕ್ತರಿಗೆ ಪುಸ್ತಕಗಳನ್ನು ಮನೆಗೆ ಒಯ್ಯಲು ನೀಡುತ್ತಿದ್ದರು. ಪುಸ್ತಕ ಒಯ್ದವರು ಮತ್ತೆ ಪುನಃ ಪುಸ್ತಕ ಮನೆಯತ್ತ ತಿರುಗಿ ನೋಡಿಲ್ಲ! ಅತ್ತ ಪುಸ್ತಕವೂ ಹೋಯಿತು, ಇತ್ತ ವ್ಯಕ್ತಿಯೂ ನಾಪತ್ತೆ. ಈಗ ಮನೆಗೆ ಒಯ್ಯಲು ಕೊಡುತ್ತಿಲ್ಲ. ಸ್ಥಳದಲ್ಲೇ ಎಷ್ಟು ಹೊತ್ತಾದರೂ ಓದಲು ಅವಕಾಶ. ಯಾವುದೇ ಶುಲ್ಕವಿಲ್ಲ. 'ಹಲವಾರು ಮಂದಿ ಓದಲು ಬರುತ್ತಿರಬೇಕಲ್ವಾ' ಎಂದುದಕ್ಕೆ, 'ಸೋಮಾರಿಗಳು ಪುಸ್ತಕ ಓದಲ್ಲ ಸರ್' ಎಂದು ಕಣ್ಣು ಮಿಟುಕಿಸುತ್ತಾರೆ. ರಾಜ್ಯದ ನಾನಾ ಭಾಗಗಳಿಂದ ಸಂಶೋಧನಾ ವಿದ್ಯಾರ್ಥಿಗಳು ಆಗಮಿಸುತ್ತಾರೆ. ಅಧ್ಯಯನ ಮಾಡುತ್ತಾರೆ. ಕನ್ನಾಡಿನ ಬಹುತೇಕ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ತಮ್ಮ ವಿದ್ಯಾರ್ಥಿಗಳಿಗೆ ಪಾಂಡವಪುರದತ್ತ ಬೆರಳು ತೋರುತ್ತಾರಂತೆ.

'ಪಾಂಡವಪುರದಲ್ಲಿ ನಾನಿದ್ದರೆ ದಿವಸದ ಇಪ್ಪತ್ತನಾಲ್ಕು ಗಂಟೆಯೂ ಪುಸ್ತಕ ಮನೆ ತೆರೆದಿರುತ್ತದೆ. ಮಾತಿಗೆ ನಾನೂ ತೆರೆದುಕೊಳ್ಳುತ್ತೇನೆ' ಎನ್ನುವ ಅಂಕೇಗೌಡರು, ಈ ಕಾಯಕವನ್ನು ಹಣ ಮಾಡುವ ದಂಧೆಯನ್ನಾಗಿ ಮಾಡಿಲ್ಲ. 'ಇದು ಪುಸ್ತಕ ಸೇವೆ. ನನ್ನ ನಂತರವೂ ಉಳಿಯಬೇಕು' ಎನ್ನುತ್ತಾ ಭಾವುಕರಾಗುತ್ತಾರೆ. ಎಪ್ಪತ್ತೆರಡು ವರುಷದ ಅಂಕೇಗೌಡರ ಆಸಕ್ತಿಯ ಮುಂದೆ ಅವರ ವಯಸ್ಸು ಮಂಡಿಯೂರಿದೆ. ಸಂಗ್ರಹ ಕೆಲಸಗಳು ರಜೆ ತೆಕ್ಕೊಳ್ಳುತ್ತಿಲ್ಲ. ಇನ್ನು ಸಾಕು ಅಂತ ತೋರಿಲ್ಲ. ಇನ್ನಷ್ಟು ಪುಸ್ತಕಗಳು ಸೇರಬೇಕೆಂಬ ಆಸೆ, ಮಹದಾಸೆ.

ಥಕ್ಕನೆ ನೋಡಿದಾಗ ಪುಸ್ತಕದ ರಾಶಿಗಳು ರಾಚುತ್ತವೆ. ವ್ಯವಸ್ಥಿತವಾಗಿ ಜೋಡಿಸಿಟ್ಟಿಲ್ಲ. ಕಾರಣವನ್ನು ಅಂಕೇಗೌಡರು ಹೇಳದೆ ಬಿಡಲಿಲ್ಲ – 'ಇವನ್ನೆಲ್ಲ ತುಂಬಿಡಲು ಏನಿಲ್ಲವೆಂದರೂ ಆರುನೂರಕ್ಕೂ ಹೆಚ್ಚು ಕಪಾಟುಗಳು ಬೇಕು. ಅಷ್ಟೊಂದು ತಕ್ಷಣಕ್ಕೆ ಹೊಂದಿಸಲು ಕಷ್ಟ. ಸರಸ್ವತಿ ಸೇವೆಯೆಂದು ದಾನಿಗಳು ಮುಂದೆ ಬಂದರೆ ಸಂತೋಷ', ಎನ್ನುವ ಖುಷಿ ಒಂದೆಡೆ.



Limca
Book of Records
National Record

Ankegowda (66) of Pandavapura, Mandhya, Karnataka who has been collecting books for the last 33 years, now has the largest personal collection of 10 lakh books. Originally stored at his small home, he now has a large hall, his 'book house' fondly known as Ankegowda Jnana Pratishthana Pustaka Mane with books in 8-10 different languages, in all genres.

Vijaya Ghose
Editor, Limca Book of Records

ಅಂಕೇಗೌಡರ ಪುಸ್ತಕಪ್ರೇಮಕ್ಕೆ 'ಲಿಮ್ಕಾ' ಗೌರವ

'ಖಂಡಿತ ಈ ಪುಸ್ತಕ ಮನೆಯನ್ನು ವ್ಯವಸ್ಥಿತವಾಗಿ ಮಾಡೇ ಮಾಡ್ತೀನಿ. ನೋಡ್ತಾ ಇರಿ' ಎಂಬ ಛಲ ಮತ್ತೊಂದೆಡೆ.

## ಅತಿ ಮೋಹವಿಲ್ಲದ ದಂಪತಿ

ಗೌಡರ ಪತ್ನಿ ವಿಜಯಲಕ್ಷ್ಮೀ. ಗಂಡನ ಆಸಕ್ತಿಯ ಚೇತನಾಶಕ್ತಿ. 'ಹಬ್ಬಕ್ಕೆ ಹೊಸ ಬಟ್ಟೆಯ ಬದಲು ಹೊಸ ಪುಸ್ತಕ ತಂದರೆ ಅವಳೆಂದೂ ಗೊಣಗಾಟ ಮಾಡಿದ್ದಿಲ್ಲ. ದಿನಸಿ ತರಲು ಮರೆತುಹೋಗಿ ಪುಸ್ತಕ ತಂದಾಗಲೂ ನಗುಮುಖದ ಸ್ವಾಗತ ನೀಡಿದ್ದಾಳೆ. ಇದಕ್ಕಿಂತ ದೊಡ್ಡ ಭಾಗ್ಯ ಇನ್ನೇನು ಬೇಕು.' – ಅಂಕೇಗೌಡರ ತೃಪ್ತ ಭಾವ. ತಮ್ಮ ಪತ್ನಿಯ ಕಾಯಕವನ್ನು ಮನಸಾ ನೆನೆದು ಗೌರವಿಸುತ್ತಾರೆ. ಹತ್ತು ಲಕ್ಷ ಪುಸ್ತಕಗಳನ್ನು ಇವರಿಬ್ಬರೇ ನಿರ್ವಹಿಸುತ್ತಾರೆ ಎಂದರೆ ನಂಬ್ತೀರಾ?

ತೀರಾ ಸರಳ ಬದುಕು. ಸ್ವಂತಕ್ಕಾಗಿ ಪ್ರತ್ಯೇಕ ಮನೆ ಮಾಡಿಕೊಂಡಿಲ್ಲ. ಪುಸ್ತಕ ಮನೆಯೇ ಬದುಕಿನ ಮನೆ ಕೂಡಾ. ವೃತ್ತಿಯಲ್ಲಿದ್ದಾಗ ಗಳಿಕೆಯ ಮುಕ್ಕಾಲು ಪಾಲು ಪುಸ್ತಕಗಳಿಗೆ ವಿನಿಯೋಗ. ಪುಸ್ತಕಗಳು ಅಲ್ಲದೆ ಹತ್ತು ಸಾವಿರಕ್ಕೂ ಮಿಕ್ಕಿ ಅಂಚೆಚೀಟಿಗಳು, ಹಳೆ ನಾಣ್ಯಗಳು, ನೋಟುಗಳು, ಗ್ರೀಟಿಂಗ್ ಕಾರ್ಡುಗಳು, ಲಗ್ನ ಪತ್ರಿಕೆಗಳು ಪುಸ್ತಕಗಳಿಗೆ ಸಾಥ್ ನೀಡಿವೆ.

ವಿದ್ಯುತ್, ಮನೆವಾರ್ತೆ – ಹೀಗೆ ಏನಿಲ್ಲವೆಂದರೂ ತಿಂಗಳಿಗೆ ಮೂವತ್ತು ಸಾವಿರ ರೂಪಾಯಿ ವೆಚ್ಚಕ್ಕೆ ಬೇಕು. ಹೇಗೋ ಹೊಂದಾಣಿಸಿಕೊಂಡು ನಿಭಾಯಿಸುತ್ತಿದ್ದಾರೆ. ಯಾರಲ್ಲೂ 'ದೇಹಿ' ಎನ್ನದ ಸ್ವಾಭಿಮಾನಿ. ಹೀಗಿರುತ್ತಾ ಪುಸ್ತಕ, ಸಾಹಿತ್ಯ ಎನ್ನುತ್ತಾ ಕೋಟಿಗಟ್ಟಲೆ ರೂಪಾಯಿ ವ್ಯಯವನ್ನು ತೋರಿಸುವ ಇಲಾಖೆಯ ಫೈಲುಗಳು ಯಾಕೆ 'ಪುಸ್ತಕ ಮನೆ'ಯತ್ತ ಹೊರಳುವುದಿಲ್ಲ? ಈ ಕಾಲಘಟ್ಟದಲ್ಲಿ ನೆರವು ಸಿಕ್ಕರೆ ಪುಸ್ತಕ ಸಂಸ್ಕೃತಿಯೊಂದನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಅಂಕೇಗೌಡರ ಶ್ರಮಕ್ಕೆ ಮಾನ ಸಿಕ್ಕಂತಾಗುತ್ತದೆ.

ಪುಸ್ತಕದ ಓದಿನಿಂದ ಜ್ಞಾನದ ವೃದ್ಧಿ. ಏಕಾಂತಕ್ಕಿರುವ ಸ್ನೇಹಿತ. ಪುಸ್ತಕ ಮತ್ತು ಅದರ ಓದಿನ ಸವಿಯನ್ನುಂಡವರಿಗೆ ನವಮಾಧ್ಯಮಗಳ ಭರಾಟೆ ಕೇಳಿಸದು! ಮೊಬೈಲ್ ಕೂಡಾ ಒಂದು ಪುಸ್ತಕ ಇದ್ದಂತೆ. ಅದರಲ್ಲೂ ಪುಸ್ತಕಗಳನ್ನು ಇಳಿಸಿಕೊಳ್ಳುವ ವ್ಯವಸ್ಥೆಯಿದೆ. ಸಾವಿರಗಟ್ಟಲೆ ಸುರಿದು ಮೊಬೈಲ್ ಖರೀದಿಸಿದರೆ ಸಾಲದು, ಅದರಲ್ಲಿರುವ ತಂತ್ರಾಂಶಗಳ ಜ್ಞಾನವೂ ಬೇಕು.

ಅಂಕೇಗೌಡರ ಪುಸ್ತಕ ಸಂಗ್ರಹವು ಲಿಮ್ಕಾ ದಾಖಲೆಯಲ್ಲಿ ದಾಖಲಾಗಿದೆ. ಅವರಲ್ಲಿಂದ ಮರಳುವಾಗ ಅವರಾಡಿದ ಮಾತು ಎಂದೂ ಮರೆಯದು, ''ಇಲ್ಲಿಗೆ ಕವಿಗಳು, ಸಾಹಿತಿಗಳು ಯಾಕೆ ಬರುತ್ತಾರೆ ಸರ್? ಹಿಂದಿವರು ಏನು ಓದಿದರೋ ಅದರಂತೆ ಬರೆದರು. ಏನು ಬರೆದರೋ ಅದರಂತೆ ಬದುಕಿದರು. ಬದುಕಿದಂತೆ ಬರೆಯುತ್ತಿದ್ದರು. ಪ್ರಸ್ತುತ ಸಮಾಜವನ್ನು ಕಟ್ಟುವ ಕವಿಗಳಿಲ್ಲ, ಸಾಹಿತಿಗಳಿಲ್ಲ.''